# ಮಾಧ್ಯಮ ಮಂಗಳ

ಸಂಪುಟ:11 ಸಂಚಿಕೆ:05 ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ದಿನಾಂಕ:ಡಿಸೆಂಬರ್ 14, 2015



ಕರಾವಳಿ ಕರ್ನಾಟಕದ ಪಾಡ್ದನದ ಕಂಪು

ಪುಟ 2



ಮಂಗಳೂರು ವಿಶ್ವವಿದ್ಯಾನಿಲಯಲ್ಲಿ ಯಕ್ಷಪ್ರಶಸ್ತಿ ಪ್ರಧಾನ

ಪುಟ 3



ಮಂಗಳೂರಿಗರ ಮನತಣಿಸಿದ ತುಳುಚಿತ್ರ 'ಐಸ್‌ಕ್ರೀಮ್'

ಪುಟ 4

## ಉತ್ತಮ ನಾಗರಿಕರ ನಿರ್ಮಾಣ ಶಿಕ್ಷಣದ ಉದ್ದೇಶವಾಗಬೇಕು: ಪ್ರೊ.ಹೆಗ್ಡೆ

**ಮಂಗಳಗಂಗೋತ್ರಿ;** ಶಿಕ್ಷಣ ಆರೋಗ್ಯಕರವಾದ ಮನಸ್ಸನ್ನು ರೂಪಿಸಬೇಕು.ಆದರೆ ಇಂದು ಶಿಕ್ಷಣವು ವ್ಯಾಧಿಗ್ರಸ್ತವಾಗಿದೆ. ಹೀಗಾಗಿ, ನಾವು ಎಷ್ಟು ಮಂದಿ ಉತ್ತಮ ನಾಗರಿಕರನ್ನು ಸಮಾಜಕ್ಕೋಸ್ಕರ ರೂಪಿಸುತ್ತಿದ್ದೇವೆ ಎಂದು ಯೋಚಿಸಬೇಕಾಗಿದೆ ಎಂದು ಪದ್ಮಭೂಷಣ ಡಾ ಬಿ.ಎಂ.ಹೆಗ್ಡೆ ತಿಳಿಸಿದ್ದಾರೆ.

ಅವರು ಸ್ವಾಯತ್ತ ಕಾಲೇಜುಗಳ ಪರಿಣಾಮ,ದೂರದೃಷ್ಟಿ ಹಾಗೂ ಸವಾಲುಗಳು ಬಗ್ಗೆ ಇತ್ತೀಚೆಗೆ ನಡೆದ ರಾಜ್ಯಮಟ್ಟದ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣವು ವಿದ್ಯಾರ್ಥಿಗಳಿಗೆ ಉತ್ಸಾಹವನ್ನು ತುಂಬಬೇಕು.ಉತ್ತಮ ಮನಸ್ಸನ್ನು ನಿರ್ಮಿಸುವುದು ಇದರ ಉದ್ದೇಶವಾಗಬೇಕೆ ಹೊರತು ಸಂಪತ್ಭರಿತ ಭಫಿಷ್ಯವನ್ನಲ್ಲ. ಇಂದಿನ ಜನತೆ ಸಂಬಳಕ್ಕೋಸ್ಕರ ಉದ್ಯೋಗಕ್ಕೆ ತೆರಳುತ್ತಿದ್ದಾರೆ.ಅವರಲ್ಲಿ ಕೆಲಸಕ್ಕೆ ತೆರಳುವ ಉತ್ಸಾಹ ಕಾಣುತ್ತಿಲ್ಲ.ಇಂದು ಶಾಲೆಗಳೂ ಜೈಲಿನಂತಾಗಿಬಿಟ್ಟಿವೆ.ಮಕ್ಕಳು ರಜೆ ಬಂದಾಗ ಖುಷಿಪಡುತ್ತವೆ. ಶಿಕ್ಷಕರು ಆಸಕ್ತಿವಹಿಸಿ ಮಕ್ಕಳಲ್ಲಿ ಉತ್ಸಾಹ ಮತ್ತು ಪ್ರೇರೇಪಿಸುವ ಕೆಲಸ ಮಾಡಬೇಕು. ಶಿಕ್ಷಕರು ಚಿಂತಕರಾಗಿರಬೇಕು ಹಾಗೂ ಮಾಹಿತಿಯನ್ನು ವಿದ್ಯಾರ್ಥಿಗಳಲ್ಲಿ ಹೇಳಬೇಕು ಎಂದು ಅಭಿಪ್ರಾಯಪಟ್ಟರು.

ಇಂದು ಕೆಲವು ವಿದ್ಯಾಸಂಸ್ಥೆಗಳಲ್ಲಿ ಅಧ್ಯಾಪನದ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಟ್ಯುಟೋರಿಯಲ್‌ಗಳಿಗೆ ಮೊರೆ ಹೋಗುತ್ತಿದ್ದಾರೆ. ವಿಶ್ವವಿದ್ಯಾಲಯಗಳನ್ನು ನಾವೇಕೆ ಹೊಂದಿದ್ದೇವೆ ಎಂಬುದರ ಬಗ್ಗೆ ಆಲೋಚಿಸಬೇಕಾಗಿದೆ. ಶಿಕ್ಷಣವೆಂಬುದು ಉದ್ಯಮವಾಗಬಾರದು. ಅದರ ಬದಲಾಗಿ ಆರೋಗ್ಯಕರ ಮನಸ್ಸು ನಿರ್ಮಾಣವಾಗಬೇಕು ಎಂದು ತಿಳಿಸಿದರು.




*ಸ್ವಾಯತ್ತ ಕಾಲೇಜುಗಳ ಪರಿಣಾಮ,ದೂರದೃಷ್ಟಿ ಹಾಗೂ ಸವಾಲುಗಳು ಬಗ್ಗೆ ನಡೆದ ರಾಜ್ಯಮಟ್ಟದ ವಿಚಾರಗೋಷ್ಠಿಯನ್ನು ಪದ್ಮಭೂಷಣ ಡಾ ಬಿ.ಎಂ.ಹೆಗ್ಡೆ ಉದ್ಘಾಟಿಸುತ್ತಿರುವುದು.*

ದಿಕ್ಸೂಚಿ ಭಾಷಣ ಮಾಡಿದ ತಿರುಚಿನಾಪಳ್ಳಿ ಭಾರತಿದಾಸನ್ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ.ಸಿ.ತಂಗಮುತ್ತು ಇಂದು ಭಾರತದಲ್ಲಿ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಹಲವಾರು ಕಾಲೇಜುಗಳಿವೆ. ಈ ಮಾದರಿ ಭಾರತ ದೇಶವನ್ನು ಬಿಟ್ಟರೆ ವಿಶ್ವದ ಬೇರೆ ಯಾವ ದೇಶಗಳಲ್ಲೂ ಕಾಣ ಸಿಗುವುದಿಲ್ಲ. ಎಲ್ಲಾ ದೇಶಗಳಲ್ಲಿ ಎಲ್ಲಾ ಕಾಲೇಜುಗಳು ಸ್ವಾತಂತ್ರ್ಯ ಹೊಂದಿವೆ. ಅವರದೇ ಆದ ಘನತೆಯನ್ನು ಹೊಂದಿವೆ. ಹಾಗೂ ತಮ್ಮದೇ ಪಠ್ಯಕ್ರಮವನ್ನು ಹೊಂದಿದೆ. ಈ ಕಾಲೇಜುಗಳು ಗಮನಾರ್ಹ ಅಭಿವೃದ್ಧಿ ಹೊಂದಿವೆ. ವೃತ್ತಿಪರ ತತ್ವಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಅಭಿವೃದ್ಧಿ ಹೊಂದಿವೆ. ಸ್ವಾಯತ್ತತೆ ಹೊಂದಿರುವ ಕಾಲೇಜುಗಳು ಇತರೆ ಕಾಲೇಜುಗಳಿಗೆ ಸ್ಪರ್ಧೆ ನೀಡುತ್ತಿವೆ ಎಂದರು.

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ಸ್ವಾತಂತ್ರ್ಯ ಹೊಂದಿರುವುದಿಲ್ಲ. ಇವುಗಳು ಪರೀಕ್ಷಾ ಪದ್ಧತಿಯಲ್ಲಿ ವಿಶ್ವವಿದ್ಯಾಲಯದ ನೀತಿ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಸ್ವಾಯತ್ತತೆ ಹೊಂದುವುದು ಭಾರತ ದೇಶದಲ್ಲಿ ಒಂದು ದೊಡ್ಡ ಸವಾಲಾಗಿದೆ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮಂಗಳೂರು ವಿಶ್ವವಿದ್ಯಾನಿಲಯದ ಸಲಹೆಗಾರ ಡಾ.ಎಂ.ವಿ ಕೃಷ್ಣಸ್ವಾಮಿ ಮಾತನಾಡಿ ನಾವಿಂದು ಸ್ವಾಯತ್ತತೆ ಪರಿಕಲ್ಪನೆಯನ್ನು ಹಾಗೂ ಅಂತಹ ಕಾಲೇಜುಗಳ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಯುಜಿಸಿ ಈ ಕಾಲೇಜುಗಳಿಗೆ ಸೌಲಭ್ಯವನ್ನು ನೀಡಲು ಬಯಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ ಭೈರಪ್ಪ ವಿಶ್ವವಿದ್ಯಾನಿಲಯವು ಸ್ವಾಯತ್ತ ಕಾಲೇಜುಗಳ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸೌಲಭ್ಯಗಳನ್ನು ನೀಡಲು ಬಯಸುತ್ತದೆ ಎಂದು ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ ಟಿ.ಡಿ ಕೆಂಪರಾಜು ಹಾಗೂ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## 'ಭಾಷೆ ಮತ್ತು ಸಮಾಜ ಅನ್ಯೋನ್ಯತೆಯಿಂದಿರಬೇಕು'



*ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿ ಕುಂ ವೀರಭದ್ರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು. ಕುಲಪತಿ ಮತ್ತು ಕುಲಸಚಿವರನ್ನು ಕಾಣಬಹುದು.*

**ಮಂಗಳಗಂಗೋತ್ರಿ;** "ಭಾಷೆ ನಮ್ಮ ತಾಯಿ. ಭಾಷೆ ಮತ್ತು ಸಮಾಜ ಪರಸ್ಪರ ಅನ್ಯೋನ್ಯತೆಯಿಂದಿರಬೇಕು. ಭಾಷೆಯನ್ನು ಕಳೆದುಕೊಂಡರೆ ಭಾಷೆಯು ನಮ್ಮನ್ನು ಕಳೆದುಕೊಳ್ಳುತ್ತದೆ." ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿ ಕುಂ ವೀರಭದ್ರಪ್ಪ ಅಭಿಪ್ರಾಯಪಟ್ಟರು.

ಅವರು ಕನ್ನಡ ರಾಜ್ಯೋತ್ಸವ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಕನ್ನಡ ಭಾಷೆ ಸುಂದರವಾದುದು. ಕನ್ನಡ ಇಂದು ಅತಂತ್ರ ಸ್ಥಿತಿಯಲ್ಲಿಲ್ಲ ಆದರೆ ಕನ್ನಡಿಗರು ಅತಂತ್ರ ಸ್ಥಿತಿಯಲ್ಲಿದ್ದೇವೆ. ಕನ್ನಡವನ್ನು ಮಾತನಾಡದೇ ಇರುವುದು ತೊಂದರೆ ಭಾಷೆ ಬೆಳೆದರೆ ಮಾತ್ರ ಸಮಾಜ ಚೆನ್ನಾಗಿರಬಹುದಾಗಿದೆ. ಮಾತು ಚಲಾವಣೆಯಲ್ಲಿದ್ದರೆ ಮಾತ್ರ ಭಾವನೆಗಳು ಚೆನ್ನಾಗಿರಲು ಸಾಧ್ಯ. ಭಾಷೆ ನಮ್ಮನ್ನು ಚೇತೋಹಾರಿಯನ್ನಾಗಿ ಮಾಡುತ್ತದೆ ಎಂದು ಅವರು ತಿಳಿಸಿದರು.

ಕರ್ನಾಟಕದಷ್ಟು ಸುಂದರ ರಾಜ್ಯ ಇನ್ನೊಂದಿಲ್ಲ. ಮಕ್ಕಳಿಗೆ ಹೆತ್ತವರು ಕರ್ನಾಟಕದ ವೈಭವವನ್ನು ತೋರಿಸುವ ಕೆಲಸ ಮಾಡಬೇಕು. ಕನ್ನಡ ಸಾಹಿತ್ಯ ಸಕ್ಕರೆಯ ತುಂಡು ಇದ್ದಂತೆ. ಯಾವ ಭಾಗದಿಂದ ಸವಿದರೂ ಸಿಹಿಯೇ. ರತ್ನಾಕರ ವರ್ಣಿ ತ್ಯಾಗ ಮಾಡಿದ ಭೂಮಿ ಇದು. ಆದರೆ ಇಂದು ಕಾಲೇಜುಗಳಲ್ಲಿ ಕನ್ನಡ ವಿಭಾಗ ನಿಷ್ಪ್ರಯೋಜಕವಾಗಿರುವುದು ಒಂದು ದುರಂತವೇ ಸರಿ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ವಿವಿ ಕುಲಪತಿ ಪ್ರೊ ಕೆ ಭೈರಪ್ಪರವರು " ಇಂದು ಮನೆಗಳಲ್ಲಿ,ಶಾಲೆಗಳಲ್ಲಿ ಕನ್ನಡ ಬಳಕೆ ಕಡಿಮೆಯಾಗುತ್ತಿದೆ. ಶಾಸ್ತ್ರೀಯ ಸ್ಥಾನಮಾನ ಇದ್ದರೂ ಕನ್ನಡ ಬಳಕೆ ಕಡಿಮೆಯಾಗುತ್ತಿದೆ.ಪದವಿ ವ್ಯಾಸಂಗದಲ್ಲಿ ಕನ್ನಡ ಮೊದಲನೆಯ ವರ್ಷ ಮಾತ್ರ ಇದೆ. ಇದು ಮೂರು ವರ್ಷ ಕೂಡಾ ಅಳವಡಿಕೆಯಾಗಬೇಕು. ಇಂಜಿನಿಯ-ರಿಂಗ್ ಹಾಗೂ ಮೆಡಿಕಲ್ ವಿದ್ಯಾರ್ಥಿಗಳನ್ನು ಕನ್ನಡ ಪಠ್ಯ ಓದುವಂತೆ ಪ್ರೇರೇಪಿಸಿದಾಗ ಮಾತ್ರ ಭಾಷೆಯ ಉಳಿವು ಹಾಗೂ ಕನ್ನಡ ಸಾಹಿತ್ಯ ಬೆಳೆಯಲು ಸಾಧ್ಯ ಎಂದರು.

ವಿವಿಯ ಕುಲಸಚಿವ ಪ್ರೊ ಟಿ.ಡಿ ಕೆಂಪರಾಜು ಸ್ವಾಗತಿಸಿದರು. ರಾಜಾರಾಮ್ ತೋಳ್ಪಾಡಿರವರು ವಂದಿಸಿದರು. ಧನಂಜಯ ಕುಂಬ್ಳೆ ಕಾರ್ಯಕ್ರಮ ನಿರೂಪಿಸಿದರು.

## ಪಟೇಲರ 140ನೇ ಜನ್ಮ ದಿನಾಚರಣೆ




*ಗುಜರಾತ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪ್ರೊಫೆಸರ್ ಡಾ। ಗೌರಂಗ್ ಜಾನಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವುದು.*

**ಮಂಗಳಗಂಗೋತ್ರಿ:** "ಸರ್ದಾರ್ ವಲ್ಲಭಬಾಯಿ ಪಟೇಲರು ಸರಳತೆಯನ್ನು ಮೈಗೂಡಿಸಿಕೊಂಡಿದ್ದರು. ನಾವಿಂದು ಅವರ ಹಾದಿಯಲ್ಲಿ ನಡೆಯಬೇಕಿದೆ ಅವರ ಸಿದ್ಧಾಂತವನ್ನು ಅನುಸರಿಸಬೇಕಿದೆ" ಎಂದು ಗುಜರಾತ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪ್ರೊಫೆಸರ್ ಹಾಗೂ ಬಿಬಿಸಿ ಕಮೀಷನ್‌ನ ಸದಸ್ಯರಾದ ಡಾ। ಗೌರಂಗ್ ಜಾನಿ ಕರೆ ನೀಡಿದರು.

ಅವರು ಸರ್ದಾರ್ ವಲ್ಲಭಬಾಯಿ ಪಟೇಲರ 140ನೇ ಜನ್ಮ ದಿನದಂದು ಪಟೇಲರ ಸಾಮಾಜಿಕ ವಿಷಯದ ಕುರಿತು ಮಾತನಾಡಿದರು.

"ಸಮಾಜದಲ್ಲಿ ಮಹಿಳೆಯರ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಎರಡು ಶಾಲೆಗಳನ್ನು ತೆರೆದರು. ಗಾಂಧೀಜಿಯವರ ಅನುಯಾಯಿಯಾಗಿದ್ದ ಪಟೇಲರು ಧರ್ಮಾಚರಣೆಯನ್ನು ವಿರೋಧಿಸುವ ಮೂಲಕ ಜಾತಿ ಪದ್ಧತಿಯನ್ನು ನಿರಾಕರಿಸುವ ಪಣ ತೊಟ್ಟರು.ಯುವಕರಲ್ಲಿ ಜಾಗೃತಿಯನ್ನು ಮೂಡಿಸಿದರು ಮತ್ತು ನಿಷೇಧ ಕಾಯ್ದೆಯನ್ನು ಜಾರಿಗೆ ತಂದರು."ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಂಗಳೂರು ವಿ.ವಿ. ಕುಲಪತಿ ಪ್ರೋ ಕೆ.ಭೈರಪ್ಪರವರು" ವಿವಿಧತೆಯಲ್ಲಿ ಏಕತೆ ತರಲು ಸರ್ದಾರ್‌ಪಟೇಲ್ ಪ್ರಯತ್ನಿಸಿದರು. ಉಕ್ಕಿನ ಮನುಷ್ಯರಾಗಿದ್ದ ಅವರು ವರದಕ್ಷಿಣೆಯನ್ನು ವಿರೋಧಿಸಿದರು. ಕಾರ್ಮಿಕ ಪದ್ಧತಿಯನ್ನು ನಿವಾರಣೆ ಮಾಡುವಲ್ಲಿ ಶ್ರಮಿಸಿದರು."ಎಂದರು.

ಪ್ರೊ ಜಯರಾಜ್ ಅಮೀನ್‌ರವರು ಸ್ವಾಗತಿಸಿದರು ಹಾಗೂ ಪ್ರೊ ರಾಜಾರಾಮ್ ತೋಳ್ಪಾಡಿರವರು ವಂದಿಸಿದರು.

# ಸಂಪಾದಕೀಯ

## ಪರಿಹಾರದಲ್ಲೂ ರಾಜಕೀಯ

*ಇತ್ತೀಚೆಗೆ 114 ವರ್ಷದಲ್ಲಿನ ದಾಖಲೆ ಮಳೆಸುರಿದು ತಮಿಳುನಾಡಿನ ಚೆನ್ನೈ ಜಲಪ್ರಳಯಕ್ಕೆ ತುತ್ತಾಗಿ ಮುಳುಗಿದ್ದು ದುರಂತವೇ ಸರಿ. ದೂರದೃಷ್ಟಿಯಲ್ಲದ,ಪ್ರಕೃತಿಯ ವಿರುದ್ಧವೇ ಸಾಗಿದ ಯೋಜನೆಗಳಿಗೆ ಪ್ರಕೃತಿಯೇ ನೀಡಿದ ಉತ್ತರ ಎಂಬುವುದು ಪರಿಸರ ತಜ್ಞರ ಅಭಿಪ್ರಾಯ.*

*ಎತ್ತಿನ ಹೊಳೆ ಯೋಜನೆ ಜಾರಿಗೊಂಡಲ್ಲಿ ಕರ್ನಾಟಕದಲ್ಲೂ ಇದೇ ಪರಿಸ್ಥಿತಿ ನಿರ್ಮಾಣ ಆದಿತ್ತೆಂದು ರಾಜಕಾರಣಿಯೋರ್ವರು ಮುಕ್ತವಾಗಿ ಹೇಳಿಯೇ ಬಿಟ್ಟರು. ಚೆನ್ನೈಯಲ್ಲಿ ಉಂಟಾದ ಈ ಭೀಕರ ಜಲ ಪ್ರವಾಹಕ್ಕೆ 1.80 ಲಕ್ಷ ಜನ ಸಂತ್ರಸ್ತರಾದರು, 137 ವರ್ಷದಿಂದ ನಿರಂತರ ಮುದ್ರಣ ಕಾಣುತ್ತಿದ್ದ ದಿ ಹಿಂದೂ ಪತ್ರಿಕೆ ಈ ಬಾರಿ ಮುದ್ರಣ ಕಾಣದಂತಾಯಿತು. ತಮಿಳುನಾಡಿನಲ್ಲಿ 15,000 ಕೋಟಿ ನಷ್ಟ ಉಂಟಾಯಿತೆಂದು ಅಂದಾಜಿಸಲಾಗಿದೆ. ರಕ್ಷಣಾ ಕಾರ್ಯಕ್ಕೆ 5000 ಯೋಧರನ್ನು ಕೇಂದ್ರ ಸರಕಾರ ನೇಮಿಸಿದೆ. 35,000 ನಿರಾಶ್ರಿತ ಕೇಂದ್ರವನ್ನು ಸ್ಥಾಪನೆ ಮಾಡಲಾಯಿತು. ಅಲ್ಲದೆ ಇತರ ರಾಜ್ಯಗಳು,ಸಿನಿಮಾ ನಟ–ನಟಿಯರು,ಮಠಗಳು ಮುಂತಾದ ಸಂಸ್ಥೆಗಳು ತಮಿಳುನಾಡು ಸರಕಾರಕ್ಕೆ ಸಹಾಯಹಸ್ತವನ್ನು ಚಾಚಿದರು. ಆದರೆ ಇದೆಲ್ಲದರ ನಡುವೆಯೂ ತಮಿಳುನಾಡು ಸರಕಾರ ಪರಿಹಾರ ಕಾರ್ಯದಲ್ಲಿಯೂ ರಾಜಕಾರಣ ಮಾಡಿದ್ದು ವಿಪರ್ಯಾಸವೇ ಸರಿ.*



*ಚೆನ್ನೈನ ಪ್ರಮುಖ ಬೀದಿಗಳಲ್ಲಿ ಮುಖ್ಯಮಂತ್ರಿ ಜಯಲಲಿತಾ ಮುಳುಗಿದ ನೀರಿನಿಂದ ಮಗುವನ್ನು ಎತ್ತಿಹಿಡಿದ ಹಾಗೆ ಫ್ಲೆಕ್ಸ್ ಅಂಟಿಸಿದರು. ದೇಶದ ಇತರ ಮೂಲೆ ಮೂಲೆಗಳಿಂದ ಕಳುಹಿಸಿದ ಆಹಾರ ಪೊಟ್ಟಣಗಳ ಮೇಲೆ ಅಮ್ಮನ ಫೋಟೊ ಅಂಟಿಸಿಯೇ ವಿತರಣೆ ಮಾಡಲಾಯಿತು! ಹಸಿವಿನಿಂದ ನರಳಾಡುತ್ತಿರುವ ಜನಕ್ಕೆ ಹೆಲಿಕಾಪ್ಟರ್‌ನಲ್ಲಿ ಯೋಧರು ಆಹಾರ ನೀಡುವಾಗ ಹಸಿದ ಆ ಜನರ ಹಸಿವು ನೀಗಿಸುದಕ್ಕಿಂತ ಪೊಟ್ಟಣಕ್ಕೆ 'ಅಮ್ಮ'ನ ಫೋಟೊ ಅಂಟಿಸಿದ್ದು ತೀರಾ ವಿಪರ್ಯಾಸ.*

*ಇಲ್ಲಿ ಪರಿಹಾರ ಕಾರ್ಯದಲ್ಲಿ ಕೇವಲ ಫ್ಲೆಕ್ಸ್,ಫೋಟೊ ಅಂಟಿಸಿ ರಾಜಕಾರಣ ಮಾಡುವುದಾದರೆ ಎಲ್ಲವನ್ನು ಮಾಡಿದ್ದು ಕೇವಲ ಈ ಅಮ್ಮನೆ? ಹಾಗಾದರೆ ಕೇಂದ್ರ ಸರಕಾರ ಕಳುಹಿಸಿದ ಐದು ಸಾವಿರ ಯೋಧರಿಗೆಲ್ಲಿ ಬೆಲೆ? ದೆಹಲಿಯ ಸಂಸತ್ ಅಧಿವೇಶನದ ತುರ್ತು ಸಂದರ್ಭದಲ್ಲೂ ತಮಿಳುನಾಡಿಗೆ ಬಂದು ಪರಿಹಾರ ಕಾರ್ಯವನ್ನು ಕಣ್ಣಾರೆ ಕಂಡು ಮತ್ತೆ ಹೆಚ್ಚುವರಿ ಒಂದು ಸಾವಿರ ಕೋಟಿ ಘೋಷಿಸಿದ ಪ್ರಧಾನಿ ಮೋದಿಗೆಲ್ಲಿ ಬೆಲೆ? ಆಹಾರ ಪೊಟ್ಟಣ ಕಳುಹಿಸಿದ ಮಠ–ಮಾನ್ಯಗಳಿಗೆಲ್ಲಿ ಬೆಲೆ? ಇಷ್ಟಾದರೂ ಅಕ್ಕ–ಪಕ್ಕದ ರಾಜ್ಯಗಳು ಘೋಷಿಸಿದ ಪರಿಹಾರ ಧನವನ್ನು ಬೇಡವೆಂದ ತಮಿಳುನಾಡಿನ 'ಅಮ್ಮ' ಜಯಲಲಿತಾ ಸರ್ಕಾರದ ಏನಿದು ರಾಜಕಾರಣ? ಇನ್ನಾದರು ಅಭಿವೃದ್ಧಿ ಯೋಜನೆಗಳಲ್ಲಿ ಪ್ರಕೃತಿಯ ವಿರುದ್ದ ನಡೆಯುವುದನ್ನು ಬಿಟ್ಟು ಪ್ರಕೃತಿಗೆ ಪೂರಕವಾದ ಯೋಜನೆ ಮಾಡೋಣ.*

*ಬರ, ನೆರೆ, ಜಲಪ್ರಳಯ, ಭೂಕಂಪ ಇನ್ನಿತರ ಪ್ರಕೃತಿ ಮುನಿಸಿನ ಸಂದರ್ಭದಲ್ಲಿ ಪರಿಹಾರ ಕಾರ್ಯದಲ್ಲಿ ರಾಜಕಾರಣವನ್ನು ಬಿಟ್ಟು ಈ ದೇಶದ ಎಲ್ಲ ರಾಜ್ಯಗಳ ಜೊತೆಯೂ ಪರಸ್ಪರ ಸೌಹಾರ್ದಯುತವಾಗಿ ನಡೆಯೋಣ ಎಂಬುದೇ ನಮ್ಮ ಆಶಯ.*

**ಅಭಿಲಾಷ್.ಬಿ.ಸಿ**

# ಜಾತಿ– ಮೀಸಲಾತಿ ಮತ್ತು ಸಹಿಷ್ಣುತೆ

ಒಂದಷ್ಟು ದಿನಗಳಿಂದ ಮೀಸಲಾತಿಯ ಕುರಿತಾದ ಚರ್ಚೆ ಒಂದಷ್ಟು ಮಟ್ಟಿಗಾದರೂ ಭಾರತವನ್ನು ಅಲುಗಾಡಿಸಿದೆ ಮತ್ತು ಹೆಚ್ಚು ಜನ ಜಾತಿ ಮೀಸಲಾತಿಯ ಕುರಿತಾಗಿ ವಿಮರ್ಶಿಸಿ ಕೊಳ್ಳುವಂತಾಗಿದೆ. ಬಿಹಾರ ಚುನಾವಣೆಯಲ್ಲಿ ಆಡಳಿತ ರೂಢ ಬಿಜೆಪಿಗೆ ಹಿನ್ನಡೆ ಉಂಟಾಗಲು ಈ ಮೀಸಲಾತಿ ಚರ್ಚೆಯೂ ಒಂದು ಕಾರಣವೂ ಹೌದು ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಗುಜರಾತ್‌ನಲ್ಲಿ ನಡೆಯುತ್ತಿರುವ ಪಟೇಲ್ ಸಮುದಾಯದವರ ಮೀಸಲಾತಿ ಹೋರಾಟ ಮುಂಬರುವ ಅಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಮೇಲೆ ಪ್ರಭಾವ ಬೀರುವುದಂತೂ ಅಪ್ಪಟ ಸತ್ಯ.

**ಉನ್ನತ ಶಿಕ್ಷಣದಲ್ಲಿ ಮೀಸಲಾತಿಯ ಪ್ರಸ್ತುತತೆಯನ್ನು ಇತ್ತೀಚೆಗೆ ಸುಪ್ರೀಂ ಕೋರ್ಟ್ ಕೂಡ ಪ್ರಶ್ನಿಸಿತ್ತು.** ಸರ್ಕಾರಕ್ಕೆ ಈ ಬಗ್ಗೆ ಸಲಹೆಯನ್ನು ನೀಡಿತ್ತು. ಇಲ್ಲಿ ಪ್ರಶ್ನೆ ನಿಜವಾಗಿಯೂ ಮೀಸಲಾತಿ ಹಿಂದುಳಿದ ವರ್ಗದ ಬಡ ಜನರಿಗೆ ತಲುಪಿದೆಯಾ? ತಲುಪಿದಲ್ಲಿ ಕಳೆದ 60 ವರ್ಷಗಳಿಂದಲೂ "ಗರೀಬಿ ಹಠಾವೋ" ಚುನಾವಣಾ ಪ್ರಣಾಳಿಕೆಯಲ್ಲಿ ಉಳಿದುಕೊಂಡದ್ದು ಯಾಕೆ?

ಮೀಸಲಾತಿಯಿದೆ ಎನ್ನುವ ಕಾರಣಕ್ಕೆ ನಕಲಿ ಜಾತಿ ಪ್ರಮಾಣಗಳ ಸೃಷ್ಟಿ ಒಂದೆಡೆಯಾದರೆ ಬಡವರಿಗೆ ಸಿಗಬೇಕಾದ ಸೌಲಭ್ಯಗಳನ್ನು ಅದೇ ವರ್ಗದ ಶ್ರೀಮಂತರು ಬಳಸಿಕೊಳ್ಳುತ್ತಿರುವುದು ಇನ್ನೊಂದು ಕಡೆ. ಇಲ್ಲಿ ಪ್ರಶ್ನೆ ಮೀಸಲಾತಿ ಬೇಡ ಎನ್ನುವುದಲ್ಲ. ಭಾರತದಲ್ಲಿ ಹಿಂದುಳಿದ ವರ್ಗದವರು ಪ್ರಮುಖವಾಗಿ ದಲಿತರು ತಲೆ ಎತ್ತಿ ನಡೆದಾಡುವುದಕ್ಕಾದದ್ದು ಮೀಸಲಾತಿ ಸೌಲಭ್ಯದಿಂದಲೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಿಂದುಳಿದ ವರ್ಗದಲ್ಲಿನ ಆರ್ಥಿಕ ಸಬಲರು ಸ್ವಯಂ ಪ್ರೇರಿತರಾಗಿ ಮೀಸಲಾತಿಯಲ್ಲಿನ ಸೌಲಭ್ಯಗಳನ್ನು ವೈಯುಕ್ತಿಕವಾಗಿ ಬಿಡುವುದು ಒಳಿತು. ಅದನ್ನು ಕಾನೂನಾತ್ಮಕವಾಗಿ ಮಾಡುವುದಾದರೆ ಜಾತಿ–ಮೀಸಲಾತಿಗಳನ್ನು ಉಳಿಸಿಕೊಂಡು ಆರ್ಥಿಕ ಚೌಕಟ್ಟನ್ನು ಕಲ್ಪಿಸುವುದು ಸೂಕ್ತ.

ಪ್ರಸ್ತುತ ದೇಶದ ಅಸಹಿಷ್ಣುತೆಯ ಚರ್ಚೆಯು ಅರಂಭಗೊಂಡದ್ದು ಡಾ. ಕಲಬುರ್ಗಿಯವರ ಹತ್ಯೆಯ ನಂತರದ ಬೆಳವಣಿಗೆಯಾದರೂ ಅದು ಮೊಳಕೆಯೊಡೆದ್ದು ಜಾತಿ–ಮೀಸಲಾತಿಯ ಚರ್ಚೆಯಿಂದ. ನಂತರ ಅದು ಬಣ್ಣವನ್ನೂ, ಅಸಹಿಷ್ಣುತೆಯ ಬಣ್ಣವನ್ನೂ ಪಡೆದುಕೊಂಡಿರುವಂತದ್ದು ಎಲ್ಲರಿಗೂ ತಿಳಿದಿರುವ ವಿಚಾರವೇ. ಆದರೆ ಈಗ ಅಸಹಿಷ್ಣುತೆಯ ಹಿಂದೆಯೂ ರಾಜಕಾರಣವೇ ನಡೆಯುತ್ತಿರುವುದು. ನಾವು ತಳಮಟ್ಟದಿಂದ ಕೀಳಬೇಕಾಗಿರುವುದು ಜಾತೀಯತೆಯನ್ನು,ಬಡತನವನ್ನು ಅನ್ನುವುದು ರಾಜಕಾರಣ ಮಾಡುವವರಿಗೂ ಗೊತ್ತಿರಲಿ.

**ಅಭಿಲಾಷ್.ಬಿ.ಸಿ**

# ಕರಾವಳಿಯ ಪಾಡ್ದನದ ಕಂಪು

ತುಳುನಾಡಿನ ಬದುಕನ್ನು ಬಹು ಪುರಾತನ ಕಾಲದಿಂದಲೇ ನಿರ್ದೇಶಿಸುತ್ತಾ ಬಂದಿರುವ ಭೂತಾರಾಧನೆಯ ಸಂದರ್ಭದಲ್ಲಿ ವಿಧಿವತ್ತಾಗಿಯೂ ಇತರ ಸಂದರ್ಭಗಳಲ್ಲಿ ಹವ್ಯಾಸಕ್ಕಾಗಿಯೂ ನಿರೂಪಿಸುವ ವಿಶಿಷ್ಟ ಪಳಮೆಗಳೇ ಪಾಡ್ದನ ಅಥವಾ ಸಂಧಿಗಳು. ಇವುಗಳನ್ನು ನಾವು ತುಳುನಾಡಿನ ವಿಶಿಷ್ಟ ಪುರಾಣಗಳೆನ್ನಲು ಅಡ್ಡಿಯಿಲ್ಲ. ದೈವಗಳನ್ನು ಆವೇಶ ಬರಿಸುವ ಕಾರ್ಯಕ್ರಮದ ಅಂಗವಾಗಿ ಸಾಮಾನ್ಯವಾಗಿ ದೈವಸೇವೆಯ ವಿಧಿಯ ಪೂರ್ವ ರಂಗದಲ್ಲಿ ಆಯಾ ದೈವದ ಹುಟ್ಟು ಕಟ್ಟು, ಆಯ, ಬೀರ, ಕಲೆ ಕರಣಿಕಗಳನ್ನು ವರ್ಣಿಸುವ ಪಾಡ್ದನಗಳನ್ನು ನಿರ್ದಿಷ್ಟ ಧಾಟಿಗಳನ್ನು ತೆಂಬರೆ ಮೊದಲಾದ ಚರ್ಮವಾದ್ಯಗಳೊಂದಿಗೆ ದೈವ ಪರಿಚಾರಕರು ಹಾಡುತ್ತಾರೆ. ಆರಾಧನೆ ಸಂದರ್ಭದಲ್ಲಿಯೂ ಇವುಗಳಲ್ಲಿ ಕೆಲವನ್ನು ಹಾಡಬಹುದು. ದ್ರವ್ಯ ಕಥನಕ್ಕೆ ಹೊರತಾದ ಲೌಕಿಕ ವಸ್ತುಗಳುಳ್ಳ ಪಾಡ್ದನಗಳೂ ಸಾಕಷ್ಟಿವೆ.

ಪಾಡ್ದನಗಳು ವೈವಿಧ್ಯ ಪೂರ್ಣವಾಗಿವೆ. ಅವುಗಳಲ್ಲಿ ಕೆಲವನ್ನು ಜನಪದ ಕಥನ ಕವನಗಳ ಸಮೂಹಕ್ಕೆ ಸೇರಿಸಬಹುದಾದರೆ ಇನ್ನೂ ಕೆಲವು ಜನಪದ ಮಹಾಕಾವ್ಯ ವರ್ಗಕ್ಕೆ ಸೇರಬಲ್ಲವು.

ದೈವರಾಧನೆಯು ತುಳುನಾಡಿನಷ್ಟೇ ಕೇರಳದಲ್ಲೂ ಪ್ರಮುಖವಾಗಿದೆ. ಅಲ್ಲಿನ ತೈಯಂ ದೈವಗಳಿಗೆ ಸಂಬಂಧಪಟ್ಟ ಹಾಡುಗಳನ್ನು ತೋಟ್ಟಮ್ ಎನ್ನುತ್ತಾರೆ ಇದು ಸ್ತೋತ್ರಮ ಎಂಬುದರ ತದ್ಭವ ಎನ್ನಲಾಗಿದೆ. ಭಗವತೀ ಚರಿತ್ರೆಯನ್ನು ತಾಳಬದ್ಧವಾಗಿ ಹಾಡುವುದಿದೆ. ಇದನ್ನು ಚುದಿಪ್ಪು ಎನ್ನುತ್ತಾರೆ. ಇದು ಸ್ತುತಿ ಎಂಬುದರಿಂದ ರೂಪುಗೊಂಡ ಶಬ್ದವಾಗಿದೆ. ಸ್ತುತಿ, ಪ್ರಾರ್ಥನೆ ಎಂಬ



ಅರ್ಥವು ಇಲ್ಲಿ ಸಮನ್ವಯವಾದಂತೆ ತುಳುವಿನ ಪಾಡ್ದನ ಸಂದರ್ಭಕ್ಕೂ ಅನ್ವಯಿಸುತ್ತದೆ ಎನ್ನಬಹುದು. ಬಡಗು ಭಾಗದ ಪಣಾರಾಟದ ಪಾಡ್ದನ ಕನ್ನಡ ರೂಪವನ್ನು ಹೊಗಳಿಕೆ ಎನ್ನುವುದು ಗಮನೀಯ. ಹಾಗೆಂದು ಪಾಡ್ದನಗಳು ಕೇವಲ ರೂಪದ ರಚನೆಯಲ್ಲ. ಅವುಗಳು ಸಾಮಾನ್ಯವಾಗಿ ಆಯಾ ದೈವದ ಮಹಿಮಾನು ವರ್ಣನೆಯ ಐತಿಹ್ಯ ಕಥನಗಳು. ಆದರೆ ದೈವ ದೇವರ ಕಥನಗಳ ನಿರೂಪಣೆಯೂ ಪರ್ಯಾಯವಾಗಿ ಪ್ರಾರ್ಥನೆಯೂ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಪಾಡ್ದನಗಳನ್ನು ತುಳುವಿನಲ್ಲಿ ಸಂಧಿಗಳೆಂದು ಕರೆಯುತ್ತಾರೆ. ಕೆಲವು ದೀರ್ಘ ಪಾಡ್ದನಗಳು (ಉದಾ: ಕೋಟಿ, ಚೆನ್ನಯ, ಸಿರಿ) ಬೇರೆ ಬೇರೆ ಅಧ್ಯಾಯಗಳಿಂದ ಕೂಡಿವೆ. ಒಂದೇ ಸಂಧಿಯ ಕಥನವೂ ಕ್ರಮೇಣ ಸಂಧಿಯೆಂದು ಹೆಸರು ಪಡೆದುಕೊಂಡಿರುವುದನ್ನು ಕಾಣಬಹುದು.

ದೈವಗಳಿಗೆ ಸಂಬಂಧಪಟ್ಟ ಪಾಡ್ದನಗಳನ್ನು ಆಯಾ ನೇಮ,ಕೋಲ, ಆಯನ,ಬಂಡಿ,ಮೆಚ್ಚಿ,ಮೈಮೆ, ಧರ್ಮನೇಮ ಇತ್ಯಾದಿ ಉತ್ಸವಾಚರಣೆಗಳ ನಿರ್ದಿಷ್ಟ ಸಂದರ್ಭಗಳಲ್ಲಿ ಹಾಡುತ್ತಾರೆ.

ಪಾಡ್ದನಗಳನ್ನು ಹಾಡುವ ಮುಖ್ಯ ಸಂದರ್ಭಗಳು ಎಣ್ಣೆ ಕೊಡುವಾಗ, ಸ್ನಾನ ಮಾಡಿ ಬಂದು ವೇಷ ಹಾಕುವ ಸಿದ್ಧತೆ ನಡೆಯುತ್ತಿರುವಾಗ, ಅಣಿ,ಮುಖವಾಡ ಮತ್ತು ಆಯುಧ ಧರಿಸಿಕೊಳ್ಳುವಾಗ ಎಣ್ಣೆ ಬೂಳ್ಯವನ್ನು ಹಿಡಿಯುವ ಸಂದರ್ಭದಲ್ಲಿ ಹಾಡುವ ಪಾಡ್ದನವನ್ನು ಒಸಯೋ ಸಂಧಿ ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ಭೂತದ ಉಗಮದ ವಿಚಾರವನ್ನು ಈ ಭಾಗವು ಒದಗಿಸುತ್ತದೆ. ಮುಖಕ್ಕೆ ಅರದಳ ಹಚ್ಚುವಾಗ ಹಾಗೂ ಅಲಂಕಾರ ಮಾಡಿಕೊಳ್ಳುವಾಗ ಭೂತದ ಪ್ರಸರಣ ಹಾಗೂ ಮಹಿಮೆಗಳನ್ನು ಬಣ್ಣಿಸುವ ಪಾಡ್ದನ ಭಾಗಗಳನ್ನು ಹಾಡುತ್ತಾರೆ. ಅಣಿಯನ್ನು ಕಟ್ಟಿಕೊಂಡು, ಮುಖವಾಡ ಧರಿಸಿ ಆಯುಧಗಳನ್ನು ಹಿಡಿದುಕೊಳ್ಳುವ ಹಂತದಲ್ಲಿ ಆರಾಧನೆಯ ಚಿತ್ರಣಗಳನ್ನೊಳಗೊಂಡ ಪಾಡ್ದನದ ಭಾಗವನ್ನು ಹಾಡುತ್ತಾರೆ.ಹೀಗೆ ದೈವಾರಾಧನೆ ವಿವಿಧ ಕಲಾಪಗಳಿಗೂ ಪಾಡ್ದನಗಳಿಗೂ ನಿಕಟ ಸಂಬಂಧ ಇರುವುದನ್ನು ಗಮನಿಸಬಹುದು.

**ಕುಶನ್.ಕೆ.**

# ಸಂಪಾದಕರಿಗೆ ಪತ್ರ

### ಶಿಕ್ಷಣದ ವ್ಯಾಪಾರೀಕರಣಕ್ಕೆ ತಡೆಯಿರಲಿ......

ಮಕ್ಕಳು ಬೆಳೆದು ದೊಡ್ಡವರಾಗುತ್ತಿದ್ದಂತೆ ಉನ್ನತ ವ್ಯಾಸಂಗಕ್ಕೆ ಎಲ್ಲಿ ಕಳಿಸುವುದು ಎಂಬ ತಲೆನೋವು ಪೋಷಕರದ್ದಾಗುತ್ತದೆ. ಶ್ರೀಮಂತ ವರ್ಗದ ಜನರು ಅವರವರ ಸ್ಥಿತಿ–ಗತಿಗೆ ಅನುಸಾರವಾಗಿ ಖಾಸಗಿ ಶಿಕ್ಷಣ ಸಂಸ್ಥೆಗೆ ಸೇರಿಸುತ್ತಾರೆ. ಅಲ್ಲಿಂದ ಆರಂಭವಾಯಿತು ನೋಡಿ ಶಿಕ್ಷಣದ ವ್ಯಾಪಾರೀಕರಣ.

ಆಂತರಿಕ ಪರೀಕ್ಷೆಯ ಸಂಪೂರ್ಣ ಜವಾಬ್ದಾರಿ ಆ ಸಂಸ್ಥೆಗೆ ಇರುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಂಕಗಳು ಸಲೀಸಾಗಿ ವಿದ್ಯಾರ್ಥಿಗಳ ಪಾಲಾಗುತ್ತಿದೆ; ಇದು ಸಾಮಾನ್ಯ ವರ್ಗದ ಜನರ ಮಕ್ಕಳಿಗೆ ವಿಶೇಷವಾಗಿ ಸರ್ಕಾರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಮಾರಕವಾಗಿ ಪರಿಣಮಿಸುತ್ತಿದೆ.

ಅಂಕಗಳು ಮುಖ್ಯವಲ್ಲ ಎನ್ನುವ ಮಾತು ನಿಜವಾಗಿಯೂ ಸುಳ್ಳಾಗಿದೆ. ಸರ್ಕಾರಿ ಉದ್ಯೋಗ ಪಡೆಯಲು ಅಂಕಗಳೇ ಮಾನದಂಡವಾಗಿ ಪರಿಣಮಿಸುತ್ತಿದೆ. ಖಾಸಗಿ ಒಡೆತನದ ಕಾಲೇಜುಗಳು ಪದವಿ ಮತ್ತು ಸ್ನಾತಕ್ಕೋತ್ತರ ಮಟ್ಟದಲ್ಲಿ ಬಹುತೇಕ ವಿದ್ಯಾರ್ಥಿಗಳಿಗೆ ಶೇ. 90ಕ್ಕೂ ಹೆಚ್ಚು ಆಂತರಿಕ ಅಂಕಗಳನ್ನು ನೀಡುತ್ತಿರುವುದಕ್ಕೆ ಕಡಿವಾಣ ಹಾಕಬೇಕಿದೆ.

ಇನ್ನಾದರೂ ಇದರತ್ತ ವಿಶ್ವವಿದ್ಯಾನಿಲಯಗಳು ಗಮನ ಹರಿಸಬೇಕಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಣ ಪಾರದರ್ಶಕತೆಯಿಂದ ದೊರೆಯುವಂತಾಗಬೇಕು. ಈ ಮೂಲಕ ಪ್ರತಿಯೊಂದು ವಿದ್ಯಾರ್ಥಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕಾಗಿದೆ.

ನಿತೀಶ್ ಪಿ ಬೈಂದೂರು

# ರೇಷನ್ ಕಾರ್ಡ್‌ನ ಕುರಿತು ಸುತ್ತ ಮುತ್ತ

ಬಹಳ ಮೊದಲಿನಿಂದಲೂ ರೇಷನ್ ಕಾರ್ಡ್[ಪಡಿತರ ಚೀಟಿ] ಪ್ರತಿಯೊಂದು ಕುಟುಂಬಕ್ಕೂ ಅತ್ಯಗತ್ಯವಾದ ಒಂದು ದಾಖಲೆಯಾಗಿ ನಡೆದುಕೊಂಡು ಬಂದಿದೆ. ರಾಜ್ಯ ಸರ್ಕಾರದ ಆಹಾರ ಇಲಾಖೆ ವಿತರಿಸುವ ಈ ಪಡಿತರ ಚೀಟಿ ಪಡೆಯಲು ಸರ್ಕಾರಿ ಯೋಜನೆಗಳ ಫಲ ಪಡೆಯಲು ಹಾಗೂ ಒಂದು ಮುಖ್ಯ ಗುರುತಿನ ಚೀಟಿಯಾಗಿ ಸಹಕಾರಿಯಾಗುತ್ತದೆ. ಆದ್ದರಿಂದ ಇಂದು ಪ್ರತಿಯೊಂದು ಕುಟುಂಬವು ಪಡಿತರ ಚೀಟಿಯನ್ನು ಪಡೆಯಲು ಬಯಸುತ್ತದೆ. ಆದರೆ ಅದರ ಬಗ್ಗೆ ಸರಿಯಾದ ಮಾಹಿತಿ ಅವರಿಗೆ ಇರುವುದಿಲ್ಲ.

ಸಾಮಾಜಿಕ ಕಾರಣಗಳಿಗಾಗಿ ರಾಜ್ಯ ಸರ್ಕಾರವು ಹಂಚುವ ಆಹಾರ ವಸ್ತುಗಳ ಲಾಭ ಪಡೆದುಕೊಳ್ಳಲು ರೇಷನ್ ಕಾರ್ಡ್ ಪ್ರತಿಯೊಂದು ಕುಟುಂಬಕ್ಕೂ ಅದರಲ್ಲಿರುವ ಸದಸ್ಯರ ಮೇರೆಗೆ ಸರ್ಕಾರದ ವತಿಯಿಂದ ಅಕ್ಕಿ, ಗೋಧಿ, ಸಕ್ಕರೆ ಇತ್ಯಾದಿ ಆಹಾರ ಧಾನ್ಯಗಳನ್ನು ಕೊಡಲಾಗುತ್ತದೆ. ಅದೂ ಅಲ್ಲದೆ ಸರ್ಕಾರದ ವತಿಯಿಂದ ಆಗಾಗ್ಗೆ ಬಿಡುಗಡೆಯಾಗುವ ಕಲ್ಯಾಣ ಯೋಜನೆಗಳಿಗೂ ಅರ್ಹತೆಯ ಮಾನದಂಡವಾಗಿ ಆದ್ಯತೆಯ ಕಾರ್ಡುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ.

ಕುಟುಂಬದ ಆರ್ಥಿಕ ಮಟ್ಟದ ಅನುಸಾರವಾಗಿ ಎಪಿಎಲ್ ಮತ್ತು ಬಿಪಿಎಲ್ ಎಂಬ ಎರಡು ತರಹದ ಕಾರ್ಡುಗಳನ್ನು ನೀಡಲಾಗುತ್ತಿದೆ. ಅದಲ್ಲದೆ ಅತ್ಯಂತ ಬಡವರಿಗಾಗಿ ಅಂತ್ಯೋದಯ ಆಹಾರ ಯೋಜನೆ ಕಾರ್ಡ್ ಸವಲತ್ತನ್ನು ಸರ್ಕಾರ ನೀಡುತ್ತಿದೆ. ರೇಷನ್ ಕಾರ್ಡ್‌ನ್ನು ಜಾತಿ, ಧರ್ಮ ಆಧಾರದಲ್ಲಿ ವಿಂಗಡಣೆ ಮಾಡುವುದಿಲ್ಲ. ಎಪಿಎಲ್ ಮತ್ತು ಬಿಪಿಎಲ್, ಕಡುಬಡವರು ಎಂಬಂತೆ ಆರ್ಥಿಕ ನೆಲೆಯಲ್ಲಿ ಮಾತ್ರ ವಿಂಗಡಣೆ ಮಾಡುತ್ತಾರೆ. 'ಬಡತನ ರೇಖೆಗಿಂತ ಕೆಳಗೆ' ಎನ್ನುವ ಹಣೆಪಟ್ಟಿ ಇರುವ ಕಾರಣ ಈ ಕಾರ್ಡ್‌ಗೆ ವಾರ್ಷಿಕ ವರಮಾನದ ಮಾನದಂಡ ಇದೆಯೆನ್ನುವ ಕಲ್ಪನೆ ಹಲವರ ಮನಸ್ಸಿನಲ್ಲಿದೆ. ನಿಜವಾಗಿ ಅಂಥ ಮಾನದಂಡ ಮೊದಲು ಜಾರಿಯಲ್ಲಿತ್ತು. ವಾರ್ಷಿಕ ಆದಾಯ 17000ರೂ. ಮತ್ತು 12000ರೂ. ಕೆಳಗಿನ ಕೌಟುಂಬಿಕ ವರಮಾನವನ್ನು ಬಿಪಿಎಲ್ ಕಾರ್ಡ್‌ಗೆ ಅರ್ಹರೆಂದು ಗುರುತಿಸಲಾಗುತಿತ್ತು. ಆದರೆ ರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗ ಖಾತರಿ ಯೋಜನೆಯ ದೈನಿಕ 155ರೂ. ಸಂಬಳದ ಅನುಷ್ಠಾನದ ಬಳಿಕ ಅಂಥ ಮಾಪನಗಳು ಮಹತ್ವವನ್ನು ಕಳೆದುಕೊಂಡವು ಬಳಿಕ ಕೌಟುಂಬಿಕ ಆದಾಯದ ಮಾಪನವನ್ನು ಕೈ ಬಿಟ್ಟು ಕೌಟುಂಬಿಕ ಸ್ಥಿತಿಗತಿಗಳ ಆಧಾರದಲ್ಲಿ ಬಿಪಿಎಲ್ ಕಾರ್ಡ್‌ಗಳ ಅರ್ಹತೆಯನ್ನು ನಿಗದಿಪಡಿಸುವ ಪದ್ಧತಿಯನ್ನು 2014 ಆಗಸ್ಟ್ 24ರಂದು ಸರ್ಕಾರ ಜಾರಿಗೊಳಿಸಿತು.

ಇತ್ತೀಚೆಗೆ ಬರುತ್ತಿರುವ ಎಲ್ಲಾ ಹೊಸ ರೇಷನ್ ಕಾರ್ಡ್‌ಗಳನ್ನು ನೀಡುವಾಗಲೂ ಕುಟುಂಬದ ಸದಸ್ಯರ ಬೆರಳಚ್ಚುಗಳನ್ನು ಪಡೆಯಲಾಗುತ್ತದೆ. ಇದು ನಕಲಿ ಕಾರ್ಡ್‌ಗಳ ನಿವಾರಣೆಗೆ ಅನುಸರಿಸಲಾದ ಸೂತ್ರ. ಸರ್ಕಾರದ ಕೇಂದ್ರೀಯ ಕಂಪ್ಯೂಟರ್‌ನಲ್ಲಿ ಈ ಬೆರಳಚ್ಚು ಶೇಖರಣೆಯಾಗಿರುತ್ತದೆ. ಹಾಗೂ ರೇಷನ್ ಸಾಮಾಗ್ರಿಗಳನ್ನು ಪಡೆಯುವ ಸಂದರ್ಭದಲ್ಲಿ ರೇಷನ್ ಅಂಗಡಿಗಳಲ್ಲಿ ಪುನಃ ಬೆರಳಚ್ಚು ತಾಳೆ ಹಾಕಿ ನೋಡಲಾಗುತ್ತದೆ. ಈ ಪದ್ಧತಿ ಎಲ್ಲಾ ರೇಷನ್ ಅಂಗಡಿಗಳಲ್ಲಿ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ರೇಷನ್ ಸೋರಿಕೆಯನ್ನು ತಡೆಗಟ್ಟಲು ಹಾಗೂ ಅರ್ಹರಿಗೆ ಮಾತ್ರವೇ ಸೌಲಭ್ಯ ಸಿಗಬೇಕೆಂಬ ಉದ್ದೇಶದಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ.

**ಕೋಮಲಾ**

# ಯಕ್ಷಗಾನ ಜಾಗತಿಕ ಮಟ್ಟಕ್ಕೇರಲು ಡಾ.ಮೋಹನ್ ಆಳ್ವರ ಕರೆ

**ಮಂಗಳಗಂಗೋತ್ರಿ;**ಮಂಗಳೂರು ವಿ.ವಿ.ಯ ಪಿ. ದಯಾನಂದ ಪೈ ಮತ್ತು ಪಿ. ಸತೀಶ್ ಪೈ, ಯಕ್ಷಗಾನ ಕೇಂದ್ರ ಮಂಗಳಗಂಗೋತ್ರಿ ಇದರ ಸಹಯೋಗದಲ್ಲಿ ಯಕ್ಷಪ್ರಶಸ್ತಿ ಪ್ರಧಾನ ಸಮಾರಂಭವನ್ನು ಇತ್ತೀಚೆಗೆ ಮಂಗಳೂರು ವಿ.ವಿ.ಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಯಕ್ಷಗಾನದಲ್ಲಿ ಸಾಧನೆಗೈದ ಐವರಿಗೆ ಮಂಗಳೂರು ವಿ.ವಿ. ಕುಲಪತಿ ಪ್ರೊ.ಕೆ. ಭೈರಪ್ಪನವರು ಯಕ್ಷ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.


ಪ್ರಶಸ್ತಿ ವಿಜೇತರೊಂದಿಗೆ ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಭೈರಪ್ಪ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ "ಯಕ್ಷಗಾನಕ್ಕೆ ದೇಶದಲ್ಲಿ ಶಾಸ್ತ್ರೀಯ ಮನ್ನಣೆ ದೊರಕಬೇಕು, ಶಾಸ್ತ್ರೀಯ ಮನ್ನಣೆ ದೊರಕಿದ್ದರೆ ಇದು ಜಾಗತಿಕ ಮಟ್ಟದಲ್ಲಿ ಅದಕ್ಕೆ ಶೋಭೆ ಬರುತ್ತದೆ. ಕೇರಳದಲ್ಲಿ ಕಥಕ್ಕಳಿಗಾಗಿ ಕಲಾಮಂಡಲಂನಂತೆಯೇ, ನಮ್ಮ ರಾಜ್ಯದಲ್ಲಿ ಯಕ್ಷಗಾನಕ್ಕಾಗಿ ಅಧ್ಯಯನ ಕೇಂದ್ರ ಆಗಬೇಕು. ಅದಕ್ಕೆ ಸರ್ಕಾರ ಅಪಾರ ಧನಸಹಾಯವನ್ನು ನೀಡಬೇಕು" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಂಗಳೂರು ವಿ.ವಿ. ಕುಲಪತಿ ಪ್ರೊ.ಕೆ. ಭೈರಪ್ಪ ಮಾತನಾಡಿ "ಯಕ್ಷಗಾನ ಒಂದು ವಿಶೇಷ ಕಲೆ ಮತ್ತು ಶಾಸ್ತ್ರೀಯ ಕಲೆಯಾದ್ದರಿಂದ ಇದು ರಾಜ್ಯದ ಕಲೆಯಾಗಬೇಕು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇದಕ್ಕೆ ಸ್ಪಂದಿಸಬೇಕು, ಈ ಚಿಂತನೆಯ ಸಲುವಾಗಿ ಹೋರಾಟ ನಡೆಸಿದರೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವತಿಯಿಂದ ನೆರವು ದೊರೆತು ಶಾಸ್ತ್ರೀಯ ಕಲೆಯಾಗಿ ಪರಿವರ್ತನೆ ಹೊಂದಲು ಸಾಧ್ಯ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಯಕ್ಷಗಾನ ಕೇಂದ್ರ ನಿರ್ದೇಶಕರಾದ ಪ್ರೊ.ಕೆ. ಚಿನ್ನಪ್ಪ ಗೌಡ, ಕುಲಸಚಿವ ಪ್ರೊ.ಟಿ.ಡಿ. ಕೆಂಪರಾಜು, ಶ್ರೀ ಮಾರ್ಗೋಳಿ ಗೋವಿಂದ ಶೇರೆಗಾರ ಪ್ರಸಿದ್ಧ ಸ್ತ್ರೀ ವೇಷಧಾರಿ, ಬಡಗುತಿಟ್ಟು, ಶ್ರೀಸಂಪಾಜೆ ಶೀನಪ್ಪ ರೈ ಪ್ರಸಿದ್ಧ ಯಕ್ಷಗಾನ ವೇಷಧಾರಿ, ತೆಂಕುತಿಟ್ಟು, ಶ್ರೀಮತಿ ಲೀಲಾವತಿ ಬೈಪಡಿತ್ತಾಯ ಪ್ರಸಿದ್ಧ ಭಾಗವತರು, ಡಾ. ಮೋಹನ ಕುಂಟಾರು, ಡಾ.ಎಂ.ಪ್ರಭಾಕರ ಜೋಶಿ ಯಕ್ಷಗಾನ ಸಂಶೋಧಕರು ಮತ್ತು ಹಿರಿಯ ಕಲಾವಿದರು ಉಪಸ್ಥಿತರಿದ್ದರು.

# ಮಂಗಳೂರು ವಿ.ವಿಯಲ್ಲಿ ಮಾಧ್ಯಮ ಕೇಂದ್ರ ಉದ್ಘಾಟನೆ

ಇದೇ ಮೊದಲ ಬಾರಿಗೆ ಮಂಗಳೂರು ವಿಶ್ವ ವಿದ್ಯಾನಿಲಯ,ಮಂಗಳಗಂಗೋತ್ರಿ


**ಮಾಲಾರ್ ಜಯರಾಂ ರೈರವರು ಮಾಧ್ಯಮ ಕೇಂದ್ರವನ್ನು ಉದ್ಘಾಟಿಸುತ್ತಿರುವುದು.**

ಕ್ಯಾಂಪಸ್‌ನಲ್ಲಿ ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮಗಳಲ್ಲಿ ಪತ್ರಕರ್ತರು ಭಾಗವಹಿಸಿ, ಇಲ್ಲಿಂದಲೇ ನೇರವಾಗಿ ವರದಿ ಮಾಡಲು ವಿನೂತನ ಮಾಧ್ಯಮ ಕೇಂದ್ರ ಪ್ರಾರಂಭವಾಗಿದೆ.

ಕರಾವಳಿ ಕರ್ನಾಟಕದ ಹಿರಿಯ ಪತ್ರಕರ್ತ ಮಾಲಾರ್ ಜಯರಾಂ ರೈ ಇವರು ಇತ್ತೀಚೆಗೆ ಈ ಕೇಂದ್ರವನ್ನು ಉದ್ಘಾಟಿಸಿದರು. ಮಂಗಳೂರು ವಿ.ವಿ. ಕುಲಪತಿ ಪ್ರೊ.ಕೆ. ಭೈರಪ್ಪ ಅವರ ಕನಸಿನ ಕೂಸಾದ ಈ ಕೇಂದ್ರದ ಕುರಿತು ಪತ್ರಕರ್ತರೊಂದಿಗೆ ಸಂವಾದ ನಡೆಸಲಾಯಿತು.ಇದೇ ಸಂದರ್ಭದಲ್ಲಿ ಮಂಗಳೂರು ವಿ.ವಿ. ವ್ಯಾಪ್ತಿಯಲ್ಲಿ ಬರುವ ಬಾಳೆಪುಣಿ ಮುಂತಾದ ಕೆಲವು ಗ್ರಾಮಗಳನ್ನುದತ್ತು ತೆಗೆದುಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

# ಪ್ರೊ.ಜಿ.ಪಿ. ಶಿವರಾಂ ಅವರಿಗೆ ಸಮೂಹ ಸಂವಹನ ಶಿಕ್ಷಕ ಪ್ರಶಸ್ತಿ



**ಪ್ರೊ.ಜಿ.ಪಿ. ಶಿವರಾಂರವರು ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು.**

ವಿಜಯವಾಣಿ ಕನ್ನಡ ದಿನ ಪತ್ರಿಕೆಯಿಂದ ಕೊಡಮಾಡುವ ರಾಷ್ಟ್ರೀಯ ಶಿಕ್ಷಣ ನಾಯಕತ್ವ ಕ್ಷೇತ್ರದ ಪ್ರಶಸ್ತಿ ಸಾಲಿನಲ್ಲಿ ಮಂಗಳೂರು ವಿ.ವಿ.ಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಪ್ರಾಧ್ಯಾಪಕರಾದ ಡಾ. ಜಿ.ಪಿ. ಶಿವರಾಂ ಇವರಿಗೆ ಉತ್ತಮ ಸಮೂಹ ಸಂವಹನ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಇತ್ತೀಚೆಗೆ ಸನ್ಮಾನಿಸಿದೆ.. ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರೊ.ಜಿ.ಪಿ. ಶಿವರಾಂ ಸ್ವೀಕರಿಸಿದ್ದಾರೆ.

# 'ಕರ್ನಾಟಕ ತಿಲಕ' ಸಂದೀಪ್ ಅರಿಯಡ್ಕ

ಇಂದು ಕಲೆಗಳತ್ತ ಯುವಕರ ಆಸಕ್ತಿ ಕಡಿಮೆಯಾಗುತ್ತಿದೆ.ಆದರೆ ಇದಕ್ಕೆ ಅಪವಾದ ಸಂದೀಪ್ ಅರಿಯಡ್ಕ. ಸ್ಯಾಕ್ಸೋಫೋನ್ ವಾದಕರಾದ ಇವರು ಮೂಲತಃ ಸಂಗೀತ ಕುಟುಂಬದಿಂದಲೇ ಬಂದವರು. ಇವರ ಅಜ್ಜ ಸ್ಯಾಕ್ಸೋಫೋನ್, ನಾಗಸ್ವರ ಹಾಗೂ ಕ್ಲಾರಿಯೋನೆಟ್ ವಾದಕರು. ಇದು ಇವರು ಬಾಲ್ಯದಲ್ಲೇ ಸಂಗೀತದ ಬಗ್ಗೆ ಆಸಕ್ತಿ ಹೊಂದಲು ಪ್ರೇರಣೆಯಾಯಿತು.

ಅವರು ಬಾಲ್ಯದಲ್ಲಿ ತಾತನ ಬಳಿ ಸಂಗೀತ ಕಲಿತ ನಂತರ ಪುತ್ತೂರು ರಾಮಕೃಷ್ಣ ಭಟ್ ಇವರಲ್ಲಿ ಎರಡು ವರ್ಷಗಳ ಕಾಲ ಶಾಸ್ತ್ರೀಯ ಸಂಗೀತ ಅಭ್ಯಸಿಸಿದರು. ನಂತರ ಪಿ.ಕೆ ಗಣೇಶ್ ಅವರಲ್ಲಿ ಐದು ವರುಷಗಳ ಸಂಗೀತಾಭ್ಯಾಸದ ನಂತರ ವಿದ್ವಾನ್ ಎಂ.ಕೆ.ಎಸ್ ಚೆನ್ನೈ ಅವರಲ್ಲಿ ಒಂದು ವರುಷದ ಸಂಗೀತ ಕಲಿಕೆ ಮಾಡಿದರು. ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿಯಿಂದ ತರಬೇತಿ ಪಡೆದಿರುವ ಸಂದೀಪ್ ಹೆಚ್ಚಿನ ಸಂಗೀತಾಭ್ಯಾಸವನ್ನು ಮೈಸೂರು ಪ್ರಭಾಕರ ಅವರ ಮಾರ್ಗದಶನದಲ್ಲಿ ಮಾಡುತ್ತಿದ್ದಾರೆ.

ಈಶ್ವರಮಂಗಲ ಪಂಚಲಿಂಗೇಶ್ವರ ದೇವಸ್ಥಾನ, ಮೈಸೂರು ಚಾಮುಂಡಿ ಬೆಟ್ಟ,ಕದ್ರಿ ಮಂಜುನಾಥೇಶ್ವರ ದೇವಸ್ಥಾನ ಸೇರಿದಂತೆ ರಾಜ್ಯ ಹಾಗೂ ಹೊರರಾಜ್ಯದ ಹಲವು ದೇವಸ್ಥಾನಗಳಲ್ಲಿ



ತಮ್ಮ ಸ್ಯಾಕ್ಸೋಫೋನ್ ಗಾಯನ ಉಣಬಡಿಸಿದ್ದಾರೆ.ಆಕಾಶವಾಣಿ ಮಂಗಳೂರು ಸಂಗೀತ ಸ್ಪರ್ಧೆ 2010, ಕರ್ನಾಟಕ ಸಂಗೀತ ಸ್ಯಾಕ್ಸೋಫೋನ್ ವಾದನದಲ್ಲಿ ಭಾಗವಹಿಸಿದ್ದಾರೆ.

ಡಾ.ರಾಜ್ ಕುಮಾರ್ ಕಲಾಕ್ಷೇತ್ರದಲ್ಲಿ 'ಜ್ಞಾನ ತರಂಗಿಣಿ ಪ್ರಶಸ್ತಿ', ರಾಜ್ಯಮಟ್ಟದ ಸಂಗೀತ ಸ್ಪರ್ಧೆಯಲ್ಲಿ 'ಅಭಿನಂದನಾ ಪ್ರಶಸ್ತಿ', ತ್ಯಾಗರಾಜ ಮತ್ತು ಹರಿದಾಸ ಸೇವಾ ಪ್ರತಿಷ್ಠಾನ ಬೆಂಗಳೂರು 'ಸಂಗೀತೋತ್ಸವ ಪ್ರಶಸಿ', ರಾಜ್ಯಮಟ್ಟದ ಪ್ರತಿಭೋತ್ಸವದಲ್ಲಿ 'ಕರ್ನಾಟಕ ತಿಲಕ ಪ್ರಶಸ್ತಿ' , ಇವಿಷ್ಟೆ ಅಲ್ಲದೆ ಹಲವಾರು ಸಂಘ ಸಂಸ್ಥೆಗಳಿಂದ,ದೇವಸ್ಥಾನಗಳಿಂದ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಪ್ರಶಸ್ತಿ ಎಂಬುದು ನಮಗೆ ಇನ್ನಷ್ಟು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ಟಾನಿಕ್ ನೀಡಿದಂತೆ. ಒಟ್ಟಿನಲ್ಲಿ ನನಗೆ ಸಂದ ಎಲ್ಲಾ ಪ್ರಶಸ್ತಿಗಳಿಗಿಂತ ಜನರು ನನ್ನ ಸಂಗೀತವನ್ನು ಆಲಿಸಿ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುತ್ತಾರಲ್ಲ, ಅದುವೇ ನನಗೆ ಇವೆಲ್ಲಕ್ಕಿಂತ ದೊಡ್ಡ ಪ್ರಶಸ್ತಿ ಎನ್ನುತ್ತಾರೆ. ಸಂಗೀತವೇ ನನ್ನ ಉಸಿರು, ಸಂಗೀತವೇ ನನ್ನ ಜೀವನ, ಸಂಗೀತವನ್ನು ಬಿಟ್ಟು ನಾನಿರಲಾರೆ, ಎಲ್ಲೆಲ್ಲೂ, ಎಲ್ಲರಲ್ಲೂ ಸಂಗೀತ ನೆಲೆಸಲಿ ಆಲಿಸುವ ಪ್ರೇಕ್ಷಕ ವರ್ಗದ ನಿಮ್ಮ ಸಹಕಾರ ಇರಲಿ; ಇಷ್ಟೆಲ್ಲಾ ಸಾಧನೆ, ಹಲವಾರು ಪ್ರಶಸ್ತಿಗಳನ್ನು ಗಳಿಸಿದ ಸಂದೀಪ್ ಅರಿಯಡ್ಕರವರು ಇಂದಿನ ಯುವ ಜನಾಂಗ ಸಂಗೀತ ಕ್ಷೇತ್ರದತ್ತ ಆಸಕ್ತಿ ವಹಿಸಲು ಮೂಲ ಪ್ರೇರಣೆ ಎಂದು ಹೇಳಿದರೆ ತಪ್ಪಾಗದು.

**ದಯಾನಂದ**

# ಮರೆಯಾಗುತ್ತಿರುವ ಕಂಸಾಳೆ ನೃತ್ಯ

ಜಾನಪದ ಕಲೆಗಳಲ್ಲಿ ಕಂಸಾಳೆ ನೃತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಮಲೆ ಮಹದೇಶ್ವರ ಸ್ವಾಮಿಗೆ ದೀಕ್ಷೆ ತೊಟ್ಟು ಭಕ್ತರಾದ ದೇವರ ಗುಡ್ಡರು ಬಳಸುವ ಕಂಚಿನ ತಾಳಗಳನ್ನು ಕಂಸಾಳೆ ಎಂದು ಕರೆಯುತ್ತಾರೆ. ಇದರ ಮೂಲ ಹೆಸರು ಕಾಂಸ್ಯ ತಾಳ ಎಂದು, ಇದು ಬರು ಬರುತ್ತಾ ಕಂಸಾಳೆಯಾಯಿತು.



ಕಂಸಾಳೆ ತಾಳಗಳು ಮುಚ್ಚಳದ ರೂಪದಲ್ಲಿ ಇರುತ್ತದೆ. ಬೇರೆಲ್ಲಾ ತಾಳಗಳಿಗಿಂತ ಇವು ಭಿನ್ನ. ತಾಳಕ್ಕೆ ಸೆಣಬಿನ ಉದ್ದದ ದಾರವನ್ನು ಕಟ್ಟಿರುತ್ತಾರೆ. ನರ್ತಿಸುವಾಗ ಇವುಗಳನ್ನು ಜೋಡಿಯಾಗಿ ಬಳಸುತ್ತಾರೆ.

**ದೇವರಗುಡ್ಡ:** ಹಾಲು ಮತದ ಜನಾಂಗದಲ್ಲಿ ಹರಕೆಯನ್ನು ತೀರಿಸಲು ಮಗ ಅಥವಾ ಮಗಳನ್ನು ದೀಕ್ಷೆಗಾಗಿ ದೇವರಿಗೆ ಬಿಡುತ್ತಾರೆ. ಇವರು ಮುಂದೆ ಕಂಸಾಳೆ ನೃತ್ಯವನ್ನು ಮಾಡಿ ಜೀವನ ಸಾಗಿಸಬೇಕು. ದೀಕ್ಷೆ ತೆಗೆದುಕೊಂಡ ಜನರನ್ನು ದೇವರಗುಡ್ಡ ಎಂದು ಕರೆಯುತ್ತಾರೆ. ಇವರು ಬಿಳಿಬಟ್ಟೆಯನ್ನು ಧರಿಸಿ ರುದ್ರಾಕ್ಷಿ ಮಾಲೆಯನ್ನು ಹಣೆಗೆ ವಿಭೂತಿಯನ್ನು ಹಾಕಿಕೊಂಡು ಮಾದೇಶ್ವರನ ಹುಟ್ಟು ಬದುಕಿನ ಕಥೆಯನ್ನು ಏಳುಸಾಲುಗಳ ಮೂಲಕ ಸ್ವಾರಸ್ಯಕರವಾಗಿ ಹಾಡುತ್ತಾರೆ.

**ಹುಲಿಹೆಜ್ಜೆ ಕುಣಿತ:** ಪ್ರಾಚೀನ ಜನಪದರು ಕೊಟ್ಟಿರುವ ಹೆಸರು 'ಹುಲಿಹೆಜ್ಜೆ ಕುಣಿತ'. ಬಹಳ ಹಿಂದೆ ಸಾರಿಗೆ ವ್ಯವಸ್ಥೆ ಇರಲಿಲ್ಲ ಮಹದೇಶ್ವರನ ಬೆಟ್ಟಕ್ಕೆ ಭಕ್ತರು ಕಾಲ್ನಡಿಗೆಯಲ್ಲಿ, ದಟ್ಟ ಕಾಡಿನ ನಡುವೆ ಪ್ರಯಾಣ ಮಾಡಬೇಕಾಗಿತ್ತು. ಕ್ರೂರಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು, ಗುಂಪು ಗುಂಪಾಗಿ ಹೋಗುವಾಗ ಪ್ರಯಾಣದ ಆಯಾಸಕ್ಕೊ! ಪ್ರಾಣಿಗಳ ಮೇಲಿನ ಭಯಕ್ಕೊ, ದೊಡ್ಡ ದೊಡ್ಡ ಹೆಜ್ಜೆ ಇಡುತ್ತಾ ಸಾಗುತ್ತಿದ್ದರಂತೆ.

**ಏಕ ವ್ಯಕ್ತಿ ಕಂಸಾಳೆ:** ಒಂದು ಗುಂಪು ಮೇಳದಲ್ಲಿ ಹಾಡನ್ನು ಹೇಳುತ್ತಿರುವಾಗ ಒಬ್ಬ ಕಲಾವಿದನು ತಾಳ ಮತ್ತು ಲಯಕ್ಕೆ ತಕ್ಕಂತೆ ದೇಹವನ್ನು ಬಾಗಿಸಿ ನರ್ತಿಸುವುದನ್ನು ಏಕ ವ್ಯಕ್ತಿ ಕಂಸಾಳೆ ಎನ್ನುತ್ತಾರೆ

**ಬೀಸು ಕಂಸಾಳೆ:** ಈ ಗುಂಪಿನಲ್ಲಿ 15 ಜನರಿರುತ್ತಾರೆ. ಎಡಗೈಯಲ್ಲಿ ಒಂದು ಕಂಸಾಳೆಯನ್ನು ಹಿಡಿದುಕೊಂಡು ಬಲಗೈಯಲ್ಲಿ ಇನ್ನೊಂದು ಕಂಸಾಳೆಯನ್ನು ಹಿಡಿದು ಬೀಸಿ ಎಡಗೈಯಲ್ಲಿರುವ ಕಂಸಾಳೆಗೆ ತಟ್ಟುತ್ತಾರೆ. ಹೀಗೆ ಬೀಸಿ ತಾಳ ಹಾಕಿ ನರ್ತಿಸುವುದೇ ಬೀಸು ಕಂಸಾಳೆ. ಕಲಾವಿದರು ಕಂಸಾಳೆಯನ್ನು ಬಹಳ ಏಕಾಗ್ರತೆ, ಅಭ್ಯಾಸ ಶ್ರದ್ಧೆಯಿಂದ ಕಲಿಯುತ್ತಾರೆ. ಏರಿನಿಂತು, ಕುಳಿತು, ಮಲಗಿ, ಉರುಳಾಡುತ್ತಾ ತಾಳಕ್ಕೆ ತಪ್ಪದಂತೆ ಕುಣಿಯುವುದು ನೋಡುವುದೇ ವಿಶಿಷ್ಟ ಆದರೆ ನಾವಿಂದು ಕಂಸಾಳೆಕಾರರನ್ನು, ಕಂಸಾಳೆ ನೃತ್ಯವನ್ನು ನೋಡುವುದೇ ಅಪರೂಪವಾಗಿದೆ. ಜನಪದ ಶೈಲಿಯ ಹಲವಾರು ನೃತ್ಯಗಳು ಆಧುನಿಕ ಬೇಗೆಗೆ ತತ್ತರಿಸಿ ಕಣ್ಮರೆಯಾಗಿವೆ. ಆದರೂ ಕೆಲವು ಜನರು ಕಂಸಾಳೆ ಕಲೆಯನ್ನು ಉಳಿಸುವುದಕ್ಕಾಗಿ ಕಲಿಯುವವರು ಅ ನಿ ವಾ ಂ ು ್ ೯ ವಾ ಗಿ ಸಿ ಕೊಂಡಿದ್ದಾರೆ.ಇಂತಹ ವಿಶಿಷ್ಟ ರೂಪದ ಕಂಸಾಳೆ ಕಲೆಯನ್ನು ನಾವು ಉಸಿರನ್ನಾಗಿಸಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ಏನೇ ಆಗಲಿ ಭವ್ಯ ಕರ್ನಾಟಕದ ಉತ್ತರ ಭಾಗದ ಜಾನಪದ ಕಲೆಯಾಗಿ ನಾದ ಕಸರತ್ತು ನೃತ್ಯ ಭಕ್ತಿ ಕಥಾನಕ ಹಾಡುಗಳಿಂದ ಕಂಸಾಳೆ ಇಂದು ಶ್ರೀಮಂತವಾಗಿದೆ.

**ಕುಶನ್.ಕೆ.**

# "ದೇಶಕ್ಕೆ ದಕ್ಷ ನಾಯಕರ ಅಗತ್ಯವಿದೆ"



***ಮಾಜಿ ಸೈನ್ಯಾಧಿಕಾರಿ ನಿಟ್ಟೆಗುತ್ತು ಶರತ್ ಭಂಡಾರಿ ಮಂಗಳೂರು ವಿವಿ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿರುವುದು.***

**ಮಂಗಳಗಂಗೋತ್ರಿ:**"ಇಂದು ಶಿಕ್ಷಣದ ಉದ್ದೇಶ ಕೇವಲ ಉದ್ಯೋಗ ಎಂಬಂತಾಗಿದೆ. ನಮ್ಮ ದೇಶಕ್ಕೆ ದಕ್ಷ ಹಾಗೂ ಪ್ರಾಮಾಣಿಕ ನಾಯಕರ ಅಗತ್ಯವಿದೆ" ಎಂದು ಮಾಜಿ ಸೈನ್ಯಾಧಿಕಾರಿ ನಿಟ್ಟೆಗುತ್ತು ಶರತ್ ಭಂಡಾರಿ ಅಭಿಪ್ರಾಯ ಪಟ್ಟರು.

ಅವರು 2015–16ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್‌ನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಇಂದು ಯುವಜನತೆ ತಮಗಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಸರಿಯಾದ ಹಾದಿಯಲ್ಲಿ ಸಾಗಬೇಕಿದೆ. ದಕ್ಷತೆ, ಜ್ಞಾನ ಹಾಗೂ ಬುದ್ಧಿವಂತಿಕೆಯಿಂದ ನಾವು ಮುಂದುವರೆಯಲು ಸಾಧ್ಯ ಎಂದರು.

ಇಂದು ಭಾರತೀಯ ಸೇನೆಯಲ್ಲಿ ವಿಪುಲ ಅವಕಾಶಗಳಿದ್ದು ಮೀಸಲಾತಿ ಇಲ್ಲದಿರುವ ಈ ದೇಶಪ್ರೇಮದ ಕಾರ್ಯದಲ್ಲಿ ಯುವಕರು ಮುಂದಾಗಲು ಅವರು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕುಲಪತಿ ಪ್ರೊ.ಕೆ.ಭೈರಪ್ಪ "ವೈವಿಧ್ಯಮಯ ಜೀವನದ ವಿದ್ಯಾರ್ಥಿಗಳನ್ನು ಹೊಂದಿರುವ ವಿಶ್ವವಿದ್ಯಾನಿಲಯದಲ್ಲಿ ಏಕತೆ ಇದ್ದಾಗ ಮಾತ್ರ ಗುರಿ ಸಾಧಿಸಲು ಸಾಧ್ಯ. ವಿದ್ಯಾರ್ಥಿಗಳ ಶಕ್ತಿ ಹಾಗೂ ಬೆಂಬಲ ಇದ್ದಾಗ ಮಾತ್ರ ವಿಶ್ವವಿದ್ಯಾನಿಲಯದ ಬೆಳವಣಿಗೆ ಸಾಧ್ಯ" ಎಂದು ತಿಳಿಸಿದರು.

ವಿದ್ಯಾರ್ಥಿ ಪರಿಷತ್ ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಿಗೆ ಭೇಟಿ ನೀಡಿ ವಿವಿಧ ವಿಚಾರಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಆದ್ಯತೆ ನೀಡಬೇಕು. ಇದು ರಾಷ್ಟ್ರದ ಪ್ರಗತಿಗೂ ಕಾರಣವಾಗುತ್ತದೆ" ಎಂದರು.

ಕುಲಸಚಿವ ಪ್ರೊ.ಟಿ.ಡಿ.ಕೆಂಪರಾಜು, ವಿದ್ಯಾರ್ಥಿ ಕ್ಷೇಮಪಾಲ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಪಿ.ಎಲ್. ಧರ್ಮ, ವಿದ್ಯಾರ್ಥಿ ಪರಿಷತ್‌ನ ಉಪಾಧ್ಯಕ್ಷ ಶಂಕರ್ ಕುಡ್ವ, ಸಹಕಾರ್ಯದರ್ಶಿ ಅನಿಲ್ ಕೊಟ್ಟಾರಿ, ಸಾಂಸ್ಕೃತಿಕ ಕಾರ್ಯದರ್ಶಿ ಕಾಜಲ್, ಸಹಕಾರ್ಯದರ್ಶಿ ಚೇತನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಚಿತ್ರ ವಿಮರ್ಶೆ**

# ಮಂಗಳೂರಿಗರ ಮನತಣಿಸಿದ 'ಐಸ್‌ಕ್ರೀಮ್'

ತುಳು ಚಿತ್ರರಂಗದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಹಾರರ್ ಲುಕ್‌ನ ಮೂಲಕ ಬಾಕ್ಸ್ ಆಫೀಸ್‌ಗೆ ಲಗ್ಗೆ ಇಟ್ಟ ಚಿತ್ರ "ಐಸ್‌ಕ್ರೀಮ್". ಇದು ತುಳು ಚಿತ್ರರಂಗದ 58ನೇ ಚಿತ್ರವಾಗಿದೆ.

ಸ್ವಾತಿಯೆಂಬ ಬಡ ಕುಟುಂಬದ ಸುರದ್ರೂಪಿ ಯುವತಿ, ಕಚೇರಿ ಕೆಲಸ ಮುಗಿಸಿ ಮನೆಗೆ ಬರುತ್ತಿರುವಾಗ, ಮೂವರು ಕಾಮುಕರು ಆಕೆಯನ್ನು ಅಪಹರಿಸಿ ಬಳಿಕ ಆಕೆಗೆ 'ಐಸ್ ಕ್ರೀಮ್' ತಿನ್ನಿಸಿ ಬಳಿಕ ಅತ್ಯಾಚಾರ ಎಸಗಿ ಕೊಲೆ ಮಾಡುತ್ತಾರೆ. ನಂತರ ಸ್ವಾತಿಯ ಆತ್ಮ ಕಾಮುಕರ ಮೇಲೆ ಸೇಡು ತೀರಿಸಿಕೊಳ್ಳಲು ಹೇಗೆ "ಐಸ್ ಕ್ರೀಮ್' ತಿನ್ನಿಸುತ್ತದೆ ಎಂಬುದೇ 'ಐಸ್ ಕ್ರೀಮ್' ಚಿತ್ರದ ಸುತ್ತ ಹೆಣೆದಿರುವ ಕಥೆ .

ಅಪಘಾತದಲ್ಲಿ ತಂದೆಯನ್ನು ಕಳೆದುಕೊಂಡ ಸ್ವಾತಿಗೆ ಕುಟುಂಬದ ಜವಾಬ್ದಾರಿ ಆಕೆಯ ಮೇಲೆ ಇರುತ್ತದೆ. ತಾಯಿಯ ಆರೋಗ್ಯ ಕಾಪಾಡಲು ಮತ್ತು ತಂಗಿಯ ವಿದ್ಯಾಭ್ಯಾಸಕ್ಕೆ ನೆರವಾಗುವ ಅನಿವಾರ್ಯತೆಯಿಂದಾಗಿ ಸ್ವಾತಿ ವಿಧಿಯಿಲ್ಲದೆ ಉದ್ಯೋಗವನ್ನು ಅವಲಂಬಿಸುತ್ತಾಳೆ. ಕನಸುಗಳನ್ನು ಹೊತ್ತ ಸ್ವಾತಿಯ ಬಾಳನ್ನು ಕಾಮುಕರು ಸುಟ್ಟು




| | |
|---|---|
| **ನಿರ್ದೇಶನ :** ವೇಣುಗೋಪಾಲ್ ಶೆಟ್ಟಿ | **ತಾರಾಗಣ:** ರೂಪೇಶ್ ಶೆಟ್ಟಿ, ಅನ್ವಿತಾ ರಾವ್ |
| **ನಿರ್ಮಾಪಕರು :**ಪ್ರೀತಮ್ ಸಾಗರ್, ನವಿತಾ ಜೈನ್ | **ಛಾಯಾಗ್ರಹಣ:** ರಾಜೇಶ್ ಹಳೆಯಂಗಡಿ |
| | **ಸಂಕಲನ :** ರಾಘವೇಂದ್ರ ಟಿ.ಕೆ. |

ಹಾಕುತ್ತಾರೆ. ಸತ್ತ ಬಳಿಕ ಆಕೆಯ ಆತ್ಮ ಮೋಕ್ಷ ಕಾಣದೆ ಸ್ಮಶಾನದಲ್ಲಿ ಅಲೆದಾಡುತ್ತಿರುತ್ತದೆ. ಕುಡಿತದ ಮತ್ತಿನಲ್ಲಿ ಸ್ನೇಹಿತರ ಜತೆ ಸವಾಲು ಹಾಕಿ ವಿಶಾಲ್ ಸ್ಮಶಾನದಲ್ಲಿ ಒಂದು ರಾತ್ರಿ ಕಳೆಯಲು ತೆರಳುತ್ತಾನೆ. ಈ ಸಂದರ್ಭ ಸ್ವಾತಿಯ ಸೌಂದರ್ಯಕ್ಕೆ ಮಾರುಹೋದ ವಿಶಾಲ್ ಆಕೆಯಲ್ಲಿ ಪ್ರೇಮ ನಿವೇದನೆ ಮಾಡುತ್ತಾನೆ. ಆದರೆ, ಆಕೆ ಮಾತ್ರ ವಿಶಾಲನ್ನು ತನ್ನ ಸೇಡು ತೀರಿಸಲು ದಾಳವಾಗಿ ಬಳಸಿಕೊಳ್ಳುತ್ತಾಳೆ. ನಂತರ ಶುರುವಾಗುತ್ತದೆ ಐಸ್ ಕ್ರೀಮ್‌ನ ಅಸಲಿ ಆಟ.

ಚಿತ್ರದ ಮೊದಲಾರ್ಧ ವಿಶಾಲ್ ಮತ್ತು ಸ್ವಾತಿಯ ಪರಿಚಯದ ಭಾಗವಾಗಿ ಕಾಡಿನ ಸುತ್ತವೇ ಸಾಗುತ್ತದೆ. ಸ್ಮಶಾನದಲ್ಲಿ ಮುಕ್ತಿ ಸಿಗದ ಆತ್ಮಗಳು ಭಾಗವತ, ನಾಟಕ ಕಲಾವಿದ, ಪ್ರೇಮಿಗಳು ಮತ್ತಿತರ ಪಾತ್ರಗಳಲ್ಲಿ ಬಂದು ಹೋಗುತ್ತವೆ. ತುಳು ಚಿತ್ರರಂಗದಲ್ಲಿ ಮೊದಲ ಪ್ರಯೋಗವೆಂಬಂತೆ ಚಿತ್ರದಲ್ಲಿ ಭಯಾನಕ ಸನ್ನಿವೇಶವನ್ನು ಅಳವಡಿಸಲಾಗಿದೆ. ಕೆಲ ದೃಶ್ಯಗಳು ಕನ್ನಡದ 'ರಂಗಿತರಂಗ' ಚಿತ್ರವನ್ನು ನೆನಪಿಸುವಂತಿವೆ. ಯಮಲೋಕದಲ್ಲಿ ಚಿತ್ರಗುಪ್ತನು ಯಮಧರ್ಮನಿಗೆ ಭೂಲೋಕದಲ್ಲಿ ನಡೆಯುವ ಘಟನೆಯನ್ನು ವಿವರಿಸುವ ರೀತಿಯಲ್ಲಿ ಚಿತ್ರಕಥೆಯನ್ನು ಹೆಣೆಯಲಾಗಿದೆ. ಈ ರೀತಿಯಾಗಿ ತುಳುಚಿತ್ರ ರಂಗದಲ್ಲಿ ವಿಭಿನ್ನ ಮಾದ–ರಿಯನ್ನು ಪರಿಚಯಿಸಿದ ಕೀರ್ತಿ ನಿರ್ದೇಶಕನಿಗೆ ಸಲ್ಲಬೇಕು.

ಚಿತ್ರ ಕೇವಲ ಮಧುರವಾದ ಹಾಡುಗಳಿಗೆ ಸೀಮಿತವಾಗಿರದೇ, ಐಟಂ ಸಾಂಗ್ ಮೂಲಕ ಯುವಕರನ್ನು ಸೆಳೆಯುವ ಪ್ರಯತ್ನವೂ ಚಿತ್ರದಲ್ಲಿ ಕಂಡು ಬರುತ್ತದೆ.

ಹೊಸ ಮುಖಗಳ ಪರಿಚಯದ ಮೂಲಕ ಚಿತ್ರದ ತುಂಬಾ ಹೊಸತನವನ್ನು ಕಾಯ್ದುಕೊಂಡು ಬರಲಾಗಿದ್ದು, ನಿರೂಪಕನಾಗಿರುವ ನಾಯಕ ನಟ ರೂಪೇಶ್ ಶೆಟ್ಟಿ ಅವರ ಸಹಜ ನಟನೆ ಪ್ರೇಕ್ಷಕರಿಗೆ ಇಷ್ಟವಾಗಬಹುದು. ಅನ್ವಿತಾ ರಾವ್ ಅವರು ಕೂಡ ಪಾತ್ರಕ್ಕೆ ಜೀವ ತುಂಬಿದ್ದಾರೆ. ಚೇತನ್ ರೈ ಮಾಣಿ, ದಿನೇಶ್ ಅತ್ತಾವರ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಆದರೆ, ತುಳು ಚಿತ್ರರಂಗದಲ್ಲಿ ಪ್ರಧಾನವಾಗಿರುವ ಹಾಸ್ಯದ ಕೊರತೆ ಈ ಚಲನಚಿತ್ರದಲ್ಲಿ ಎದ್ದು ಕಾಣುತ್ತಿತ್ತು.

ರಾಜೇಶ್ ಹಳೆಯಂಗಡಿ ಅವರ ಕ್ಯಾಮೆರಾ ಕೆಲಸ ತುಳು ಚಿತ್ರರಂಗದಲ್ಲಿ ಹೊಸತನವನ್ನು ತೋರಿಸಿದೆ. ಆದರೆ, ರಾಘವೇಂದ್ರ ಟಿ.ಕೆ. ಅವರ ಸಂಕಲನದಲ್ಲಿ ಕೊಂಚ ಬದಲಾವಣೆಯನ್ನು ನಿರೀಕ್ಷಿಸಲಾಗಿತ್ತು. ವೇಣುಗೋಪಾಲ್ ಶೆಟ್ಟಿ ಮತ್ತು ಪ್ರೀತಮ್ ಸಾಗರ್ ಅವರ ನಿರ್ದೇಶನದಲ್ಲಿ ಪ್ರೌಢಿಮೆ ಬೇಕಿತ್ತು. ಸಾಯಿ ಸಾಗರ್ ಕ್ರಿಯೇಷನ್ಸ್‌ನಲ್ಲಿ ಮೂಡಿಬಂದಿರುವ ಈ ಚಿತ್ರಕ್ಕೆ ಪ್ರೀತಮ್ ಸಾಗರ್ ಮತ್ತು ನವಿತಾ ಜೈನ್ ಚಿತ್ರಕ್ಕೆ ಬಂಡವಾಳ ಹಾಕುವ ಮೂಲಕ ಯಶಸ್ವಿ ಪಥದತ್ತ ಚಿತ್ರವನ್ನು ಕೊಂಡೊಯ್ಯುವ ಪ್ರಯತ್ನ ಮಾಡಲಾಗಿದೆ.

**ನಿತೀಶ್. ಪಿ**

**ವಿದ್ಯಾರ್ಥಿ ಸಂಪಾದಕರು**

ಅಭಿಲಾಷ್ ಬಿ ಸಿ
ಕೋಮಲ
ಕುಶನ್ ಕೆ
ನಿತೀಶ್ ಪಿ
ರಕ್ಷಿತಾ
ಸೌಮ್ಯಶ್ರೀ

ಸಂಪಾದಕರು ಹಾಗು ಪ್ರಕಾಶಕರು: ಪ್ರೊ. ಜಿ.ಪಿ ಶಿವರಾಂ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199. ದ.ಕ
ಕಾರ್ಯಕಾರಿ ಸಂಪಾದಕರು: ಪ್ರೊ. ವಹೀದಾ ಸುಲ್ತಾನಾ, ಮುದ್ರಕರು: ನೆಡ್ ಪ್ರಿಂಟ್ಸ್, ಯೆಯ್ಯಾಡಿ ಮಂಗಳೂರು.